ಜೆಎಸ್ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 25-07-2018

# ವರದಿ

## ಸರಿಯಿದ್ದರೆ ನಿರ್ಧಾರ, ಭವಿಷ್ಯದ ಬದುಕು ಸುಂದರ

## ಜೆಎಸ್ಎಸ್ ಮಹಿಳಾ ಕಾಲೇಜಿನಲ್ಲಿ ಕಾರ್ಯಾಗಾರ ಉದ್ಘಾಟಿಸಿ – ಶ್ರೀ ಉಮೇಶ

ಕೊಳ್ಳೇಗಾಲ : 25-07-2018 : ವಿದ್ಯಾರ್ಥಿ ಸಮೂಹದಲ್ಲಿ ಹತ್ತಾರು ರೀತಿಯ ಪ್ರತಿಭೆಗಳಿರುತ್ತವೆ. ಅವುಗಳನ್ನು ಗುರುತಿಸಿ ಅವರ ಪ್ರತಿಭೆಗೆ ಅನುಗುಣವಾಗಿ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುವಂತೆ ಮಾರ್ಗದರ್ಶನ ನೀಡಬೇಕು. ಸೂಕ್ತ ಸಮಯದ ಸರಿಯಾದ ನಿರ್ಧಾರದಿಂದ ಭವಿಷ್ಯದ ಬದುಕನ್ನು ಸುಂದರವಾಗಿಸಬಹುದು ಎಂದು ಶ್ರೀ ಉಮೇಶ, ಚಾರ್ಟರ್ಡ್ ಅಕೌಂಟೆಂಟ್, ಮೈಸೂರುರವರು ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್ಎಸ್ ಮಹಿಳಾ ಕಾಲೇಜಿನಲ್ಲಿ ವಾಣಿಜ್ಯ ಮತ್ತು ನಿರ್ವಹಣಾ ವಿಭಾಗದ "ಕಾಮರ್ಸ್ ಕ್ಲಬ್" ವತಿಯಿಂದ ಆಯೋಜಿಸಿದ್ದ "ಆನ್‌ಲೈನ್ ಮತ್ತು ಆ್ಯಪ್-ಬೇಸಿಕ್ ನೆಸೆಸಿಟಿ" ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ನೀಡುತ್ತ ಮಾತನಾಡಿದರು.

ಪ್ರಸ್ತುತ ಹೆಚ್ಚು ಉದ್ಯೋಗದ ಮಾರುಕಟ್ಟೆ ಹೊಂದಿರುವ "ಮಲ್ಟಿಮೀಡಿಯಾ" ಸಾಕಷ್ಟು ವೇಗಗತಿಯಲ್ಲಿ ಬೆಳವಣಿಗೆ ಹೊಂದುತ್ತಿದ್ದು, ಅಂತರ್ಜಾಲದ ಕಾಲದಲ್ಲಿ ಬದುಕುತ್ತಿರುವ ನಮಗೆ ಪ್ರತಿಯೊಂದಕ್ಕೂ ಆನ್‌ಲೈನ್ ಮತ್ತು ಆ್ಯಪ್‌ಗಳ ಮೇಲೆ ಅವಲಂಬಿತರಾಗಿರುತ್ತೇವೆ. ಸಾಮರ್ಥ್ಯಕ್ಕಿಂತ ನಮಗೆ ಇಂದು ಹೆಚ್ಚಾಗಿ ಕೌಶಲ್ಯದ ಅಗತ್ಯತೆ ಇದೆ. ಸೃಜನಶೀಲತೆ ಮತ್ತು ಕೌಶಲ್ಯಕ್ಕೆ ಇಂದು ಜಗತ್ತಿನಲ್ಲಿ ಹೆಚ್ಚಿನ ಬೆಲೆ ಇದೆ ಎಂದು ತಿಳಿಸಿದರು.

ಸಾಂಪ್ರದಾಯಿಕ ಕೋರ್ಸ್‌ಗಳ ಹೊರತಾಗಿ ವೃತ್ತಿ ಸೃಷ್ಟಿಸಿಕೊಡುವ ಅನೇಕ ಕೋರ್ಸ್‌ಗಳು ಇಂದು ಲಭ್ಯವಿದ್ದು ವಿದ್ಯಾರ್ಥಿಗಳು ಕೌಶಲ್ಯ ಶಿಕ್ಷಣ ಪಡೆಯುವುದರತ್ತ ಗಮನ ಹರಿಸಬೇಕಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಪ್ರೊ. ಉಮೇಶ ತಂತ್ರಜ್ಞಾನ ಬೆಳವಣಿಗೆ ಕಾಣುತ್ತಿದ್ದು ಜನರೂ ಕೂಡ ತಂತ್ರಜ್ಞಾನ ವೇಗಕ್ಕೆ ಹೆಜ್ಜೆ ಇಡಬೇಕಾದ ಅನಿವಾರ್ಯತೆ ನಿರ್ಮಾಣವಾಗಿದೆ. ಎಲ್ಲರೂ ವೈದ್ಯರು, ಇಂಜಿನಿಯರ್, ಲೆಕ್ಕ ಪರಿಶೋಧಕರಾಗಲು ಸಾಧ್ಯವಿಲ್ಲ. ಕೌಶಲ್ಯ ಹಾಗೂ ಸೃಜನಶೀಲತೆಯಿದ್ದಲ್ಲಿ ಮತ್ತು ಪ್ರಚಲಿತ ವಿದ್ಯಮಾನಗಳ ವಿಷಯದಲ್ಲಿ ಪರಿಪಕ್ವತೆಯಿದ್ದಲ್ಲಿ ಯಶಸ್ಸು ಪಡೆಯುವುದು ಸುಲಭ. ತಂತ್ರಜ್ಞಾನದಲ್ಲಿ ಅನುಕೂಲ ಹಾಗೂ ಅನಾನುಕೂಲಗಳೆರಡೂ ನಾಣ್ಯದ ಎರಡು ಮುಖಗಳಂತೆ ಇರುತ್ತವೆ. ಪ್ರಸ್ತುತ ಜೀವನದ ಅನಿವಾರ್ಯತೆ ಎಂದೇ ಬಿಂಬಿತವಾಗುತ್ತಿರುವ ತಂತ್ರಜ್ಞಾನವನ್ನು ಸರಿಯಾದ ರೀತಿಯಲ್ಲಿ ಬೆಳಸಿಕೊಂಡಲ್ಲಿ ಉಜ್ವಲ ಭವಿಷ್ಯ ಹೊಂದಬಹುದಾಗಿದೆ ಎಂದು ತಿಳಿಸಿದರು.

ವ್ಯವಹಾರ ನಿರ್ವಹಣಾ ವಿಭಾಗದ ಮುಖ್ಯಸ್ಥೆಯಾದ ಶ್ರೀಮತಿ ಎಸ್ ಮಮತ, ವಾಣಿಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಸುರೇಶ್ ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀಮತಿ ಎಸ್ ಮಮತ ಸ್ವಾಗತಿಸಿ, ವಂದಿಸಿದರು.

ವಾಣಿಜ್ಯ ಮತ್ತು ನಿರ್ವಹಣಾ ವಿಭಾಗದ "ಕಾಮರ್ಸ್ ಕ್ಲಬ್" ವತಿಯಿಂದ "ಆನ್‌ಲೈನ್ ಮತ್ತು ಆ್ಯಪ್-ಬೇಸಿಕ್ ನೆಸೆಸಿಟಿ" ಎಂಬ ವಿಷಯದ ಮೇಲೆ ಪ್ರಾಚಾರ್ಯ ಪ್ರೊ ಉಮೇಶರವರು ಮಾತನಾಡುತ್ತಿರುವುದು. ಚಿತ್ರದಲ್ಲಿ ಶ್ರೀಮತಿ ಎಸ್ ಮಮತ, ಶ್ರೀ ಉಮೇಶ್ ಹಾಗೂ ಶ್ರೀ ಸುರೇಶ್ ರವರನ್ನು ಕಾಣಬಹುದು.




ವಾಣಿಜ್ಯ ಮತ್ತು ನಿರ್ವಹಣಾ ವಿಭಾಗದ "ಕಾಮರ್ಸ್ ಕ್ಲಬ್" ವತಿಯಿಂದ "ಆನ್‌ಲೈನ್ ಮತ್ತು ಆ್ಯಪ್-ಬೇಸಿಕ್ ನೆಸೆಸಿಟಿ" ಎಂಬ ವಿಷಯದ ಮೇಲೆ ಶ್ರೀ ಉಮೇಶ್‌ರವರು ವಿಶೇಷ ಉಪನ್ಯಾಸ ನೀಡುತ್ತಿರುವುದು. ಚಿತ್ರದಲ್ಲಿ ಶ್ರೀಮತಿ ಎಸ್ ಮಮತ, ಪ್ರಾಚಾರ್ಯ ಪ್ರೊ ಉಮೇಶ ಹಾಗೂ ಶ್ರೀ ಸುರೇಶ್ ರವರನ್ನು ಕಾಣಬಹುದು.




ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಅಧ್ಯಾಪಕರು ಹಾಗೂ ವಿದ್ಯಾರ್ಥಿನಿಯರು



ಕಾರ್ಯಕ್ರಮದಲ್ಲಿ ಭಾಗವಹಿಸಿರುವ ವಿದ್ಯಾರ್ಥಿನಿಯರು

